ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 251

ವಿಧಾನ ಪರಿಷತ್ತಿನ ಸದಸ್ಯರ ಹೆಸರು : ಶ್ರೀ ಆರ್.ಧರ್ಮಸೇನ (ಸ್ಥಳೀಯ ಸಂಸ್ಥೆಗಳಿಂದ ಚುನಾಯಿತರಾದವರು)

ಉತ್ತರಿಸಬೇಕಾದ ದಿನಾಂಕ : 22.09.2020

ಉತ್ತರಿಸುವ ಸಚಿವರು : ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಹಾಗೂ ಕಾನೂನು ಮಾಪನಶಾಸ್ತ್ರ ಇಲಾಖಾ ಸಚಿವರು.

<table>
<tr><th>ಕ್ರ. ಸಂ</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ</td><td>ಮೈಸೂರು ಮತ್ತು ಚಾಮರಾಜನಗರ ಜಿಲ್ಲೆಗಳಲ್ಲಿ ಕಳೆದ ಎರಡು ವರ್ಷಗಳಲ್ಲಿ ಎಷ್ಟು ಬಿ.ಪಿ.ಎಲ್ ಕಾರ್ಡ್ ಗಳನ್ನು ಹಂಚಲಾಗಿದೆ; ಎಷ್ಟು ಅರ್ಜಿಗಳು ಇನ್ನು ವಿಲೇವಾರಿಯಾಗಬೇಕಾಗಿದೆ;</td><td>ಮೈಸೂರು ಹಾಗೂ ಚಾಮರಾಜನಗರ ಜಿಲ್ಲೆಗಳಲ್ಲಿ ಕಳೆದ ಎರಡು ವರ್ಷಗಳಲ್ಲಿ ಹಂಚಲಾದ ಬಿ.ಪಿ.ಎಲ್ ಕಾರ್ಡುಗಳು ಹಾಗೂ ವಿಲೇವಾರಿಯಾಗಬೇಕಾದ ಅರ್ಜಿಗಳ ವಿವರ ಕೆಳಕಂಡಂತಿದೆ.
<table><tr><th>ಜಿಲ್ಲೆ</th><th>ಹಂಚಲಾದ ಬಿ.ಪಿ.ಎಲ್ ಕಾರ್ಡುಗಳು</th><th>ವಿಲೇವಾರಿಯಾಗಬೇಕಾದ ಅರ್ಜಿಗಳು</th></tr><tr><td>ಮೈಸೂರು</td><td>34,564</td><td>4,373</td></tr><tr><td>ಚಾಮರಾಜನಗರ</td><td>14,943</td><td>1361</td></tr></table></td></tr>
<tr><td>ಆ</td><td>ಬಿ.ಪಿ.ಎಲ್ ಕಾರ್ಡ್ ಗಳನ್ನು ಹೊಸದಾಗಿ ಹಂಚದಿರಲು ಕಾರಣಗಳೇನು; ಸರ್ಕಾರಕ್ಕಿರುವ ಅಡಚಣೆಗಳೇನು;</td><td>ಪಡಿತರ ಚೀಟಿಯನ್ನು ಫಲಾನುಭವಿಗಳಿಗೆ ನೀಡುವ ಮುನ್ನ ಕುಟುಂಬದ ಎಲ್ಲಾ ಸದಸ್ಯರ ಬಯೋಮೆಟ್ರಿಕ್ ಪಡೆಯುವುದು ಕಡ್ಡಾಯವಾಗಿರುತ್ತದೆ. ಆದರೇ, Covid - 19ರ ಹಿನ್ನೆಲೆಯಲ್ಲಿ ಬಯೋಮೆಟ್ರಿಕ್ ವ್ಯವಸ್ಥೆಯನ್ನು ಬಳಸುವುದಕ್ಕೆ ಅಡಚಣೆಯಾದ ಕಾರಣದಿಂದ ಪಡಿತರ ಚೀಟಿಯನ್ನು ಹೊಸದಾಗಿ ನೀಡುವ ಕಾರ್ಯವನ್ನು ತಾತ್ಕಾಲಿಕವಾಗಿ ಸ್ಥಗಿತಗೊಳಿಸಲಾಗಿದೆ.
ಆದ್ಯತಾ ಪಡಿತರ ಚೀಟಿಯನ್ನು (ಪಿ.ಹೆಚ್.ಹೆಚ್) ವಿತರಿಸುವ ಮುನ್ನ ಅರ್ಜಿದಾರರ ಅರ್ಹತೆಯ ಬಗ್ಗೆ ಇಲಾಖೆಯ ಕಾರ್ಯ ನಿರ್ವಾಹಕ ಸಿಬ್ಬಂದಿ ಮುಖಾಂತರ ಸ್ಥಳ ತನಿಖೆಯನ್ನು ನಡೆಸುವುದು ಸಹ ಕಡ್ಡಾಯವಾಗಿರುತ್ತದೆ. ಕೋವಿಡ್ -19 ಸಾಂಕ್ರಾಮಿಕ ರೋಗವು ತೀವ್ರವಾಗಿ ಪಸರಿಸುತ್ತಿರುವುದರಿಂದ ಸುಗಮ ಚಲನವಲನಗಳಿಗೆ ಅಡಚಣೆ ಉಂಟಾಗಿರುವುದರಿಂದ ಆದ್ಯತಾ (ಪಿ.ಹೆಚ್.ಹೆಚ್) ಪಡಿತರ ಚೀಟಿ ವಿತರಣೆಯನ್ನು ತಾತ್ಕಾಲಿಕವಾಗಿ ನಿಲ್ಲಿಸಲಾಗಿರುತ್ತದೆ.</td></tr>
</table>

ಇ	ಎಷ್ಟು ದಿವಸಗಳಲ್ಲಿ ಬಾಕಿ ಅರ್ಜಿದಾರರಿಗೆ ಬಿ.ಪಿ.ಎಲ್ ಕಾರ್ಡ್ ಗಳನ್ನು ಹಂಚಲಾಗುವುದು?	ಕೋವಿಡ್-19 ರ ಸ್ಥಿತಿಗತಿಯನ್ನು ಆಧರಿಸಿ ಸೂಕ್ತ ಸಮಯದಲ್ಲಿ ಕಾರ್ಡುಗಳ ಹಂಚಿಕೆಗೆ ಕ್ರಮ ಜರುಗಿಸಲಾಗುತ್ತದೆ.

ಆನಾಸ 247 ಡಿಆರ್ ಎ 2020 (ಇ-ಆಫೀಸ್)

(ಕೆ.ಗೋಪಾಲಯ್ಯ)

ಆಹಾರ, ನಾಗರಿಕ ಸರಬರಾಜು ಮತ್ತು

ಗ್ರಾಹಕರ ವ್ಯವಹಾರಗಳ ಹಾಗೂ

ಕಾನೂನು ಮಾಪನಶಾಸ್ತ್ರ ಇಲಾಖಾ ಸಚಿವರು.